## ಸುಭಾಷಿತ ಮಂಜರಿ

ಖಲಃ ಕುರ್ಯಾತ್ ಖಲಂ ಲೋಕಂ
ಸಂತಮನ್ಯಂ ನ ಕಶ್ಚನ ।
ನ ಹಿ ಶಕ್ಯಂ ಪದಾರ್ಥಾನಾಂ
ಭಾವನಂ ಚ ವಿನಾಶವತ್ ॥

"ಕೆಟ್ಟ ಮನುಷ್ಯನು ಇನ್ನೊಬ್ಬನನ್ನು ಕೆಟ್ಟವನನ್ನಾಗಿ ಮಾಡಬಲ್ಲ, ಆದರೆ ಕೆಟ್ಟವನನ್ನು ಯಾವನೂ ಒಳ್ಳೆಯವನನ್ನಾಗಿ ಮಾಡಲಾರ, ವಸ್ತುಗಳನ್ನು ಹಾಳುಮಾಡುವಷ್ಟು ಸುಲಭವಾಗಿ ಉತ್ಪಾದನೆ ಮಾಡಲು ಶಕ್ಯವಲ್ಲ."

ಆತ್ಮೀಯ ಓದುಗರೇ,

ವಾರ್ಷಿಕ ವಿಶೇಷ ಕಾರ್ಯಕ್ರಮಗಳೆಲ್ಲವೂ ಏಪ್ರಿಲ್‌ನ ಈ ಸಂಚಿಕೆಯೊಂದಿಗೆ ಬಹುತೇಕ ಮುಗಿದಿದೆ ಎನ್ನಬಹುದು. ಎಸ್.ಎಸ್.ಎಲ್.ಸಿ, ಪಿ.ಯು.ಸಿ ಪರೀಕ್ಷೆಗಳು ಮುಗಿದಿದ್ದು, ಪದವಿ ವಿಭಾಗದ ಪರೀಕ್ಷೆಗಳು ನಡೆಯುತ್ತಿವೆ. 1ನೇ ತರಗತಿಯಿಂದ 10ನೇ ತರಗತಿಯವರೆಗೆ ಯಾವುದೇ ತರಗತಿಗಳಿಗೆ ಪ್ರವೇಶಾತಿ ಬಯಸಿ ಬಂದ ಎಲ್ಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೂ ದಾಖಲಾತಿ ಪ್ರಕ್ರಿಯೆ ಆರಂಭಗೊಂಡಿದೆ. ಅಲ್ಲದೇ ದೂರ ದೂರುಗಳಿಂದ ಬರುವ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳು ಸಜ್ಜಾಗಿವೆ. ಈ ವರ್ಷದ ಪ್ರಮುಖ ಯೋಜನೆಗಳಲ್ಲೊಂದಾದ ಕಿಷ್ಕಿಂಧಾ ಆಟಿಕಾವನ ಮಕ್ಕಳ ಚಟುವಟಿಕೆಗೆ ತೆರೆದುಕೊಂಡಿದೆ. ಮುಂದಿನ ತಿಂಗಳ ಸಂಚಿಕೆಯಲ್ಲಿ ಈ ವರ್ಷದ ವಿಶೇಷ ಘಟನೆಗಳನ್ನು ವರದಿ ಮಾಡುವ ಪ್ರಯತ್ನ ಮಾಡುತ್ತೇವೆ.

ವಂದನೆಗಳು

ಸಂಪಾದಕ ಬಳಗ


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ದಿವ್ಯಾಕುಮಾರಿ (ಶಿಶುಮಂದಿರ)
ಕಾವ್ಯ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ಜ್ಯೋತಿ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು


ಚಿಂತನರಶ್ಮಿ

# ಆದರ್ಶದ ತೀರ್ಮಾನ

ಐವತ್ತು ವರ್ಷಗಳ ಹಿಂದೆ ಬಂಗಾಲದಲ್ಲಿ ನೀಲಮಾಧವ ಬಂಡೋಪಾಧ್ಯಾಯರೆಂಬ ನ್ಯಾಯಾಧೀಶರಿದ್ದರು. ಅವರು ನ್ಯಾಯದ ವಿಷಯದಲ್ಲಿ ಎಷ್ಟು ನಿಷ್ಠುರರೋ, ಸತ್ಯದ ವಿಷಯದಲ್ಲಿ ಅಷ್ಟೇ ಖಚಿತವಾದಿಗಳು. ಅವರು ತಪ್ಪಿ ಕೂಡ ಸುಳ್ಳು ಹೇಳುವವರಲ್ಲ ಎಂಬ ಖ್ಯಾತಿ ಬಂಗಾಲದಲ್ಲೆಲ್ಲ ಹರಡಿತ್ತು. ಯಾವುದೇ ಒಂದು ತನಿಖೆ ಅವರ ಮುಂದೆ ಹೋಯಿತೆಂದರೆ ನ್ಯಾಯದ ಕಡೆಗಿದ್ದ ಫೀರ್ಯಾದುದಾರರಿಗೆ ನಿರಾಳವಾಗುತ್ತಿತ್ತು. ಸುಳ್ಳು ಅಪಾದನೆ ಮಾಡಿದವರು ಸಿಕ್ಕಿ ಬೀಳುತ್ತಿದ್ದರು. ಬಂಡೋಪಾಧ್ಯಾಯರು ಪರಿಶ್ರಮ ವಹಿಸಿ ಕಟ್ಟೆಚ್ಚರದಿಂದ ಸತ್ಯವನ್ನು ಕಂಡು ಹಿಡಿದು ತೀರ್ಮಾನ ನೀಡುತ್ತಿದ್ದರು. ಅವರು ತೀರ್ಮಾನ ಕೊಟ್ಟ ಮೇಲೆ ಸೋತವರು ಸಾಮಾನ್ಯವಾಗಿ ಮೇಲಿನ ಕೋರ್ಟಿಗೆ ಅಪೀಲು ಹೋಗುತ್ತಿರಲಿಲ್ಲವಂತೆ. ಯಾಕೆಂದರೆ ಮೇಲಿನ ಕೋರ್ಟಿನವರಿಗೂ ಬಂಡೋಪಾಧ್ಯಾಯರು ನೀಡಿದ ತೀರ್ಪಿನ ಬಗ್ಗೆ ಅಷ್ಟು ವಿಶ್ವಾಸವಿರುತ್ತಿತ್ತಂತೆ.

ಬಂಡೋಪಾಧ್ಯಾಯರಿಗೆ ವಯಸ್ಸಾಯಿತು, ಅನಾರೋಗ್ಯ ಅವರನ್ನು ಕಾಡತೊಡಗಿತು. ಇನ್ನು ಬಹಳ ದಿನ ಬದುಕುವುದು ಸಾಧ್ಯವಿಲ್ಲ ಎನ್ನಿಸಿತು. ಆಗ ಬಂಡೋಪಾಧ್ಯಾಯರು ತಮ್ಮ ಮಗನನ್ನು ಕರೆದು, "ಮಗೂ ಒಂದು ವಿಷಯ ಮರೆತೇ ಬಿಟ್ಟಿದ್ದೆ. ನನ್ನಿಂದ ಅಪಚಾರವಾಗಿ ಬಿಡುತ್ತಿತ್ತು" ಎಂದರು. ಏನು ಬೇಕಾಗಿತ್ತು ಎಂದು ಕೇಳಿದ ಮಗನಿಗೆ,"ನಾನು ವಿಮೆ ಮಾಡಿಸಿದ್ದೀನಲ್ಲ, ಆ ಕಂಪನಿಯ ಅಧಿಕಾರಿಗಳಲ್ಲಿ ಯಾರನ್ನಾದರೂ ಬರಹೇಳು" ಎಂದರು.

ಮಗನಿಗೆ ಅದು ಯಾಕೆ ಎಂದು ತಿಳಿಯದಿದ್ದರೂ ತಂದೆಯ ಕೋರಿಕೆಯಂತೆ ವಿಮಾ ಕಂಪನಿಯ ಅಧಿಕಾರಿಯನ್ನು ಕರೆಯಿಸಿದರು. ಅಧಿಕಾರಿ ಬಂದು, "ಸ್ವಾಮೀ, ನನ್ನಿಂದ ಏನಾದರೂ ಸೇವೆ ಆಗುವುದಿದ್ದರೆ ತಿಳಿಸಿ, ತಕ್ಷಣ ಮಾಡುತ್ತೇನೆ" ಎಂದ.

ಆಗ ಬಂಡೋಪಾಧ್ಯಾಯರು, "ದಯವಿಟ್ಟು ನಾನು ಮಾಡಿಸಿದ ವಿಮೆಯನ್ನು ತಕ್ಷಣವೇ ರದ್ದುಮಾಡಿ, ನನಗೆ ಹೆಚ್ಚು ಸಮಯವಿಲ್ಲ" ಎಂದರು. ಆಗ ಆತ, "ಸರ್, ತಾವು ದೀರ್ಘಕಾಲ ಬಾಳಬೇಕೆಂಬುದೇ ನಮ್ಮೆಲ್ಲರ ಆಸೆ. ಆದರೆ ಹಾಗಾಗದಿದ್ದರೆ ಇರಲಿ ಎಂದೇ ತಾನೇ ಈ ವಿಮೆಯನ್ನು ಮಾಡಿಸುವುದು? ಈ ಹಂತದಲ್ಲಿ ತಾವು ಅದನ್ನು ರದ್ದು ಮಾಡಿದರೆ ತಮ್ಮ ಮನೆಯವರಿಗೆ ದೊರಕಬೇಕಾದ ದೊಡ್ಡ ಮೊತ್ತ ದೊರಕದೇ ಹೋಗುತ್ತದೆ. ದಯವಿಟ್ಟು ಯೋಚಿಸಿ" ಎಂದ. ಬಂಡೋಪಾಧ್ಯಾಯರು, ಹಾಗೆ ಯೋಚನೆ ಮಾಡಿಯೇ ನಿಮ್ಮನ್ನು ಕರೆಸಿದ್ದೇನೆ. ನನ್ನಿಂದ ಒಂದು ಅಪರಾಧವಾಗಿದೆ.

ನಾನು ವಿಮೆ ಮಾಡಿಸುವಾಗ ನನಗೆ ಒಂದು ರೋಗ ಬಂದಿತ್ತು. ಆದರೂ ನಾನು ವಿಮೆ ಮಾಡಿಸಿದ್ದೆ. ಯಾಕೆಂದರೆ ಅದೊಂದು ದೊಡ್ಡ ಕಾಯಿಲೆಯೆಂದು ನಾನೂ ಭಾವಿಸಿರಲಿಲ್ಲ ಮತ್ತು ವೈದ್ಯರು ಹೇಳಿರಲಿಲ್ಲ. ಈಗ ನನಗೆ ಬಂದ ತೀವ್ರ ಅನಾರೋಗ್ಯ ಆ ಹಳೆಯ ರೋಗದ ಉಲ್ಬಣ ಸ್ಥಿತಿ ಎಂದು ಗೊತ್ತಾಗಿದೆ. ಆದ್ದರಿಂದ ಆಗ ರೋಗವಿದ್ದದ್ದು ಗೊತ್ತಿದ್ದೂ ವಿಮೆ ಮಾಡಿಸಿದ್ದು ಮತ್ತು ನನ್ನ ನಂತರ ಕಂಪನಿಯಿಂದ ಪರಿಹಾರ ಪಡೆಯುವುದು ಅಪಚಾರ ಹಾಗೂ ಅಪರಾಧ. ಆದ್ದರಿಂದ ಈಗ ನಾನು ಬದುಕಿರುವಾಗಲೇ ಅದನ್ನು ರದ್ದು ಪಡಿಸಿಬಿಡಿ. ಅಂದರೆ ನಾನು ಕಂಪೆನಿಗೆ ಮೋಸ ಮಾಡಲಿಲ್ಲ ಎಂಬ ನಿಶ್ಚಿಂತೆಯಿಂದ ಪ್ರಾಣ ಬಿಡುತ್ತೇನೆ" ಎಂದರು.

ಅವರು ಹೇಳಿದಂತೆಯೇ ವಿಮೆಯನ್ನು ರದ್ದುಗೊಳಿಸಿದರು. ಮರುದಿನವೇ ಅವರ ಪ್ರಾಣ ದೇಹವನ್ನು ತೊರೆಯಿತು.

# ಶಿಶುಮಂದಿರ

**ಸಾಮೂಹಿಕ ಹುಟ್ಟುಹಬ್ಬ 15–3–2017**

ಶ್ರೀರಾಮ ಶಿಶುಮಂದಿರದಲ್ಲಿ ಸಾಮೂಹಿಕ ಹುಟ್ಟುಹಬ್ಬ ಕಾರ್ಯಕ್ರಮದ ನಿಮಿತ್ತ ಶಿಶುಮಂದಿರದ ಮಾತೆಯರು ಮಕ್ಕಳಿಗೆ ಆರತಿ ಎತ್ತಿ, ಅಕ್ಷತೆ ಹಾಕಿ, ತಿಲಕ ಇಟ್ಟು ಸಿಹಿಯನ್ನು ನೀಡಿ ಆಶೀರ್ವಾದಿಸಿದರು. ರಾಷ್ಟ್ರ ಸೇವಿಕಾ ಸಮಿತಿಯ ಸಹ ಸಂಚಾಲಿಕಾ ಶ್ರೀಮತಿ ಡಾ॥ ಕಮಲಾ ಭಟ್ ಇವರು ಹುಟ್ಟುಹಬ್ಬ ಆಚರಣೆ ಕೇಕ್ ಕ್ಯಾಂಡಲ್‌ಗಳ ಬದಲು ಹಿಂದು ಸಂಪ್ರದಾಯದಂತೆ ದೀಪ ಬೆಳಗಿಸಿ ಹಿರಿಯರ ಆಶೀರ್ವಾದ ಪಡೆಯಬೇಕು ಎಂದರು. ನಂತರ ಶ್ರೀರಾಮ ಪ್ರಾಥಮಿಕ ಶಾಲೆಯ ಶ್ರೀಮತಿ ಅನ್ನಪೂರ್ಣ ಮಾತಾಜಿ ಮಕ್ಕಳಿಗೆ ಕಥೆಯನ್ನು ಹೇಳಿದರು. ಒಟ್ಟು 158 ಮಕ್ಕಳು 45 ಮಂದಿ ಪಾಲಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಭ। ದಿವ್ಯ ಸ್ವಾಗತಿಸಿ, ಭ। ಲಕ್ಷಿತಾ ನಿರೂಪಿಸಿ ಭ। ವಿನಯ ವಂದಿಸಿದರು.

**ಶ್ರೀ ಸರಸ್ವತಿ ಶಿಶುಮಂದಿರ 30–3–2017**

ಶ್ರೀ ಸರಸ್ವತಿ ಶಿಶುಮಂದಿರ ಶೇಡಿಗುರಿಯಲ್ಲಿ ಸಾಮೂಹಿಕ ಹುಟ್ಟುಹಬ್ಬ ಕಾರ್ಯಕ್ರಮವನ್ನು ಆಚರಿಸಲಾಯಿತು. ಶಿಶುಮಂದಿರದ ಪುಟಾಣಿಗಳು ಮಾತೆಯರ ಪಾದಕ್ಕೆ ನೀರನ್ನು ಹಾಕಿ ಅರಶಿನ ಕುಂಕುಮ ಅಕ್ಷತೆಯನ್ನು ಇಟ್ಟು ಹೂವನ್ನು ಹಾಕಿ ಆಶೀರ್ವಾದವನ್ನು ಪಡೆದು ತಾಯಿಯ ಪಾದ ಪೂಜೆಯನ್ನು ಮಾಡಿದರು. ಶ್ರೀಮತಿ ಡಾ॥ ಕಮಲಾ ಭಟ್ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಮತಿ ಪ್ರೀತಾಮಾತಾಜಿ ಯುಗಾದಿ ಹಬ್ಬ ಆಚರಣೆ, ಶಿಶುಮಂದಿರದಲ್ಲಿ ನೀಡುವ ಶಿಕ್ಷಣದ ಬಗ್ಗೆ ತಿಳಿಸಿದರು ಶ್ರೀಯುತ ಕಮಲಾಕ್ಷ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವೇದಿಕೆಯಲ್ಲಿ ಶಿಶುಮಂದಿರದ ಅಧ್ಯಕ್ಷರಾದ ಶ್ರೀ ರಘು ಸಪಲ್ಯ ಹಾಗೂ ಶಿಶುಮಂದಿರದ ಸಂಚಾಲಕರಾದ ಶ್ರೀ ದಿವಾಕರ ಭಂಡಾರಿ ಉಪಸ್ಥಿತರಿದ್ದರು. ನಂತರ ಶಿಶುಮಂದಿರದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಒಟ್ಟು 110 ಮಂದಿ ಭಾಗವಹಿಸಿದ್ದರು.

**ಅಕ್ಕಮಹಾದೇವಿ ಶಿಶುಮಂದಿರ 26–3–2017**

ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಶಿಶುಮಂದಿರದ ಪುಟಾಣಿಗಳ ಪ್ರತಿಭಾ ದಿನೋತ್ಸವ ಕಾರ್ಯಕ್ರಮವನ್ನು ಮಾಡಲಾಯಿತು. ಶ್ರೀ ಸುಧಾಕರ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅಥಿತಿಯಾಗಿ ಶ್ರೀಮತಿ ಕಲ್ಪನಾ ಶಶಿಧರ ರಾವ್ ಭಾಗವಹಿಸಿದ್ದರು. ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶಿಶುಮಂದಿರಲ್ಲಿ ನೀಡುವ ಶಿಕ್ಷಣದ ಬಗ್ಗೆ ತಿಳಿಸಿದರು. ಶಿಶುಮಂದಿರದ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಪ್ರಸಾದ್ ಕುಮಾರ್ ಪ್ರಸ್ತಾವಿಕ ಮಾತುಗಳನ್ನಾಡಿದರು. ಶಿಶುಮಂದಿರದ ಅಧ್ಯಕ್ಷರಾದ ಶ್ರೀ ಪ್ರಮೋದ್ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ನಂತರ ಶಿಶುಮಂದಿರದ ಪುಟಾಣಿಗಳು ಹಾಗೂ ಬಾಲಗೋಕುಲದ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಶ್ರೀಮತಿ ಕವಿತಾ ನಿರೂಪಿಸಿ ಶ್ರೀಮತಿ ಅಕ್ಷತಾ ಸ್ವಾಗತಿಸಿ ಶ್ರೀಯುತ ಆನಂದ ವಂದಿಸಿದರು.

**ಹೊರಸಂಚಾರ 19–3–2017**

ಶ್ರೀಗಣೇಶ ಶಿಶುಮಂದಿರ ಬೊಂಡಾಲ : ಶಿಶುಮಂದಿರದ ಪುಟಾಣಿಗಳ ಪೋಷಕರು ಹಾಗೂ ಮಾತೆಯರಿಗೆ ಏರ್ಪಡಿಸಲಾದ ಪ್ರವಾಸದಲ್ಲಿ 30 ಮಂದಿ ಪಾಲ್ಗೊಂಡು ನಡುಬೆಟ್ಟು, ಕನ್ಯಾಡಿ, ಸೂರ್ಯ ದೇವಸ್ಥಾನಕ್ಕೆ ಭೇಟಿ ನೀಡಿದರು.

**ಶ್ರೀ ಕೃಷ್ಣ ಶಿಶುಮಂದಿರ ಸಜೀಪ** : ಶಿಶುಮಂದಿರದ ಪುಟಾಣಿಗಳ ಪೋಷಕರು ಹಾಗೂ ಮಾತೆಯರಿಗೆ ಏರ್ಪಡಿಸಲಾದ ಪ್ರವಾಸದಲ್ಲಿ 26 ಮಂದಿ ಪಾಲ್ಗೊಂಡು ಶೃಂಗೇರಿ, ಹೊರನಾಡು, ಕಳಸ, ದೇವಸ್ಥಾನಗಳಿಗೆ ಭೇಟಿ ನೀಡಿದರು.

**ಹೊರಸಂಚಾರ 23–3–2017**

ಶ್ರೀರಾಮ ಶಿಶುಮಂದಿರದ ಮಕ್ಕಳು ಪಜೀರು ಬೀಜಗುರಿ ಇಲ್ಲಿಯ ಗೋ ಶಾಲೆಗೆ ಭೇಟಿ ನೀಡಿ ಅಲ್ಲಿಂದ ಇನೋಳಿ ದೇವಂತ ಬೆಟ್ಟ ಶ್ರೀ ಸೋಮನಾಥೇಶ್ವರ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಪಡೆದು ಅಲ್ಲಿಯೇ ಭೋಜನ ಪ್ರಸಾದವನ್ನು ಸ್ವೀಕರಿಸಿ ತೆರಳಿದರು. ಒಟ್ಟು 125 ಮಕ್ಕಳು 3 ಮಂದಿ ಆಡಳಿತ ಮಂಡಳಿ ಸದಸ್ಯರು ಭಾಗವಹಿಸಿದ್ದರು.

**ಯುಗಾದಿ ಉತ್ಸವ**

ಶ್ರೀರಾಮ ಶಿಶುಮಂದಿರದ ಆಶ್ರಯದಲ್ಲಿರುವ ಶಿಶುಮಂದಿರಗಳಲ್ಲಿ ಯುಗಾದಿ ಉತ್ಸವವನ್ನು ಮಾಡಲಾಯಿತು. ಸುತ್ತಮುತ್ತಲಿನ ಪರಿಸರದ ಮನೆಗಳಿಗೆ ತೆರಳಿ ಬೇವು ಬೆಲ್ಲ, ಅರಶಿನ ಕುಂಕುಮ, ಹೂವು ನೀಡುವುದರ ಮೂಲಕ ಆಚರಿಸಲಾಯಿತು.

ಶ್ರೀ ರಾಮ ಶಿಶುಮಂದಿರ ಕಲ್ಲಡ್ಕದ ವತಿಯಿಂದ 420 ಮನೆ, ಶ್ರೀ ಗಣೇಶ ಶಿಶುಮಂದಿರ 110 ಮನೆ ಶ್ರೀ ಸರಸ್ವತಿ ಶಿಶುಮಂದಿರ ಶೇಡಿಗುರಿ 65 ಮನೆ ಶ್ರೀ ಅಕ್ಕಮಹಾದೇವಿ ಶಿಶುಮಂದಿರ 100 ಮನೆ ಶ್ರೀ ಕೃಷ್ಣ ಶಿಶುಮಂದಿರ 100 ಮನೆಗಳಿಗೆ ತೆರಳಿ ಮಾತಾಜಿಗಳು ಮಾತೆಯರು ಶುಭಾಷಯ ತಿಳಿಸಿದರು.

**ಶಿಶುಮಂದಿರಕ್ಕೆ ಭೇಟಿ**

ದಿನಾಂಕ 23–3–2017 ರಂದು ಚಲನಚಿತ್ರ ನಟ ಗಣೇಶ್ ಇವರು ಶಿಶುಮಂದಿರಕ್ಕೆ ಭೇಟಿ ನೀಡಿದರು. ಶಿಶುಮಂದಿರದ ಮುಖ್ಯ ಮತಾಜಿ ಭ। ಗಂಗಾ ಇವರು ಶಿಶುಮಂದಿರದಲ್ಲಿ ನೀಡುವ ಶಿಕ್ಷಣದ ಬಗ್ಗೆ ವಿವರಿಸಿದರು.

# ಪ್ರಾಥಮಿಕ ಶಾಲೆ

**“ಚಿಗುರು” ಬೇಸಿಗೆ ಶಿಬಿರ ಉದ್ಘಾಟನೆ**

ದಿನಾಂಕ 30.03.2017ರಂದು ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕ ಇಲ್ಲಿ “ಚಿಗುರು” ಎಂಬ ನಾಮಾಂಕಿತದ ಬೇಸಿಗೆ ಶಿಬಿರದ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ವಿದೇಶದಲ್ಲಿ ಉದ್ಯಮಿಗಳಾಗಿರುವ ಜಯಾನಂದ ಆಚಾರ್ಯ ಹೊಂಬಾಳೆ ಅರಳಿಸಿದರು, ಕೆ.ಎಸ್.ಆರ್.ಟಿ.ಸಿ ಚಾಲಕರಾಗಿರುವ ದಯಾನಂದ ಇವರು ಗಿಡಕ್ಕೆ ನೀರು ಎರೆಯುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ವಿದ್ಯಾರ್ಥಿಗಳಾದ ಖುಷಿ ಹಾಗೂ ವಿಂದ್ಯಶ್ರೀ ಬಣ್ಣವನ್ನು ಎರೆಚುವ ಮೂಲಕ ಭಿತ್ತಿಪತ್ರ ಅನಾವರಣಗೊಳಿದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನ್ಯಾಯವಾದಿ ಶಿವಗಿರಿ ಸತೀಶ್ ಭಟ್ ಶಿಬಿರದಲ್ಲಿ ನಡೆಯುವ ವಿವಿಧ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ಭಾಗವಹಿಸಿ ಶಿಬಿರದ ನಾಮಾಧೇಯದಂತೆ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗಳು ಚಿಗುರಲಿ ಎಂದು ಶುಭಹಾರೈಸಿದರು. ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಉಪಸ್ಥಿತರಿದ್ದರು. ಸೌಭಾಗ್ಯ ನಿರೂಪಿಸಿ, ವಾತ್ಸಲ್ಯ ಸ್ವಾಗತಿಸಿದರು

# ಪ್ರೌಢಶಾಲೆ

**ಚಿಲುಮೆ ಬೇಸಿಗೆ ಶಿಬಿರ – 2017**

ಶಿಕ್ಷಣವೆಂಬುದು ವ್ಯಕ್ತಿಯ ವ್ಯಕ್ತಿತ್ವದ ನಿರ್ಮಾಣಕ್ಕೆ ಪೂರಕವಾಗಬೇಕು. ವಿದ್ಯಾರ್ಥಿಗಳ ಸುಪ್ತ ಪ್ರತಿಭೆಗೆ ಶಿಕ್ಷಣದಲ್ಲಿ ಅವಕಾಶವಿರಬೇಕು. ವಿದ್ಯಾರ್ಥಿಗಳ ಪ್ರತಿಭೆಯನ್ನು ಹೊರಹೊಮ್ಮಿಸಲು ಹಾಗೂ ಬೆಳೆಸಲು ಚಿಲುಮೆ ಬೇಸಿಗೆ ಶಿಬಿರ 2017 ಸಹಾಯಕವಾಗಲಿ ಎಂದು ಶ್ರೀ ರಾಜೀವ ಭಂಡಾರಿ, ಜಿಲ್ಲಾಧ್ಯಕ್ಷರು ರೈತಾಮೋರ್ಚಾ ದ.ಕ ಜಿಲ್ಲಾ ಬಿ.ಜೆ.ಪಿ ಅವರು ಶ್ರೀರಾಮ ಪ್ರೌಢಶಾಲೆಯಲ್ಲಿ ನಡೆದ ‘ಚಿಲುಮೆ ಬೇಸಿಗೆ ಶಿಬಿರ’ ಉದ್ಘಾಟಿಸಿ ಮಾತನಾಡಿದರು.

ವೇದಿಕೆಯಲ್ಲಿ ಶ್ರೀ ಅರುಣ್ ವಿಟ್ಲ ಅಧ್ಯಕ್ಷರು ಪಟ್ಟಣ ಪಂಚಾಯತ್ ವಿಟ್ಲ, ಶ್ರೀ ಮೌನೇಶ್ ವಿಶ್ವಕರ್ಮ ರಂಗಕರ್ಮಿ, ಶ್ರೀಮತಿ ಅಕ್ಷತಾರಾಜ್ ಸಾಹಿತಿ, ಶ್ರೀಮತಿ ಜಯಂತಿ ಶಿಕ್ಷಕಿ ಅ.ಹಿ.ಪ್ರ. ಶಾಲೆ ಕೆದಿಲ ಅಮ್ಮೂರು, ಶ್ರೀಮತಿ ಗೀತಾ ಸಾರಡ್ಕ ಸಂಗೀತ ವಿದುಷಿ, ಮುಖ್ಯ ಶಿಕ್ಷಕ ಶ್ರೀ ರಮೇಶ್ ಉಪಸ್ಥಿತರಿದ್ದರು. ಪ್ರೇಕ್ಷಾ 8 ಪ್ರಹ್ಲಾದ, ಹರ್ಷಿತಾ 9 ಭಾಸ್ಕರ, ವೈಷ್ಣವಿ 8 ಪ್ರಹ್ಲಾದ ನಡೆಸಿದರು.

ನೃತ್ಯ, ನಾಟಕ, ಗಾಯನ, ಬರವಣಿಗೆ, ವಿಜ್ಞಾನ, ಚಿತ್ರಕಲೆ ಎಂಬ ಆರು ವಿಭಾಗಗಳಲ್ಲಿ ಶಿಬಿರವು ನೆರವೇರಿತು.

**ವಿಜ್ಞಾನ ದಿನಾಚರಣೆ:**

ಆಕಾಂಕ್ಷಾ ಚಾರಿಟೇಬಲ್ ಟ್ರಸ್ಟ್ ಮತ್ತು ಜಿಲ್ಲಾ ಉಪನಿರ್ದೇಶಕರ ಕಛೇರಿ ಮಂಗಳೂರು ಇದರ ಜಂಟಿ ಆಶ್ರಯದಲ್ಲಿ ಶ್ರೀ ರಾಮಕೃಷ್ಣ ಪ್ರೌಢಶಾಲೆ ಪುತ್ತೂರಿನಲ್ಲಿ ದಿನಾಂಕ 02.03.2017 ರಂದು ವಿಜ್ಞಾನ ದಿನಾಚರಣೆಯ ಅಂಗವಾಗಿ ನಡೆದ ವಿವಿಧ ವಿಜ್ಞಾನ ಸ್ಪರ್ಧೆಗಳಲ್ಲಿ ಶ್ರೀರಾಮ ಪ್ರೌಢಶಾಲಾ 6 ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದರು.

**ರಾಷ್ಟ್ರೀಯ ವಿಜ್ಞಾನ ದಿನಾಚರಣೆ:04.03.2017**

ಶ್ರೀರಾಮ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ವಿಜ್ಞಾನ ವಸ್ತುಪ್ರದರ್ಶಿನಿಯನ್ನು ಏರ್ಪಡಿಸಲಾಯಿತು.

ಶ್ರೀ ವೆಂಕಟ್ರಮಣ ಆಚಾರ್ (ಜಿಲ್ಲಾ

ವಿಜ್ಞಾನ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಜಿಪ ಶಾಲೆಯ ವಿಜ್ಞಾನ ಶಿಕ್ಷಕರು) ಆಗಮಿಸಿ ವಿದ್ಯಾರ್ಥಿಗಳು ವೈಜ್ಞಾನಿಕ ಚಿಂತನೆಯಲ್ಲಿ ತೊಡಗಿಸಿಕೊಳ್ಳುವಂತೆ ಕರೆ ನೀಡಿದರು. ಶ್ರೀರಾಮ ಪ್ರೌಢಶಾಲಾ ವಿಜ್ಞಾನ ಅಧ್ಯಾಪಕಿ ಶ್ರೀಮತಿ ವಿನುತಾರವರು ವಿಜ್ಞಾನಕ್ಕೆ ಭಾರತೀಯರ ಕೊಡುಗೆ ಈ ವಿಷಯದಲ್ಲಿ ಮಾತಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಪ್ರಭಾಕರ ಭಟ್ ಕಲ್ಲಡ್ಕ ಉಪಸ್ಥಿತರಿದ್ದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

## ಪದವಿಪೂರ್ವ

**ದೀಪ ಪ್ರದಾನ – 2016–2017**

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬಳ್ಳಾರಿ ಜಿಲ್ಲೆಯ ಹಿರಿಯಡಗಲ ತಾಲೂಕಿನ ಶ್ರೀ ಅಭಿನವ ಹಾಲ ಸ್ವಾಮೀಜಿ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳು ಆಗಮಿಸಿ ನೆರೆದಿರುವ ಸರ್ವರಿಗೂ ಆರ್ಶಿವಚನ ನೀಡಿದರು. ವಿದ್ಯಾರ್ಥಿ ಜೀವನದಲ್ಲಿ ಬೆಳೆಸಿಕೊಳ್ಳುವ ಮೌಲ್ಯವು ಜೀವನದ ಕೊನೆಯವರೆಗೂ ಉಳಿಯುವಂದ್ದು, ಅವುಗಳನ್ನು ಬೆಳೆಸಿಕೊಳ್ಳುವುದು ಅಗತ್ಯ. ಶ್ರೀರಾಮ ವಿದ್ಯಾಕೇಂದ್ರದಲ್ಲಿನ ವಿದ್ಯಾರ್ಥಿಗಳ ಅಚ್ಚುಕಟ್ಟಿನ ರೀತಿ ನೀತಿಯನ್ನು ನೋಡಿ ಸಂತಸ ವ್ಯಕ್ತಪಡಿಸಿ ಹಿರಿಯರಾದ ಡಾ। ಪ್ರಭಾಕರ್ ಭಟ್ ರವರಿಗೆ ಎಳವೆಯಲ್ಲಿಯೇ ಪ್ರಭಾವಿತನಾಗಿದ್ದೆ, ಅಂತಹ ವ್ಯಕ್ತಿಯ ಮಾರ್ಗದರ್ಶನದಲ್ಲಿ ನಡೆಯುವ ವಿದ್ಯಾ ಸಂಸ್ಥೆಯಲ್ಲಿ ಅಧ್ಯಯನ ನಡೆಸುವ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ನವದೆಹಲಿಯಿಂದ ಅತಿಥಿಯಾಗಿ ಆಗಮಿಸಿದ್ದ ಗುರುಮೀತ್ ಸಿಂಗ್ ರವರು ಮಾತನಾಡಿ ಕಾಲೇಜಿನ ವಿದ್ಯಾರ್ಥಿಗಳ ಆಚಾರ–ವಿಚಾರಗಳನ್ನು ಪ್ರಶಂಸಿಸಿದರು.

ತಿರುವನಂತಪುರಂ ಅನಂತ ಪದ್ಮನಾಭ ದೇವಸ್ಥಾನದ ಟ್ರಸ್ಟಿಯಾಗಿರುವ ಪ್ರಸಾದ್ ಪಣಿಕ್ಕರ ರವರು ಗುರುಕುಲ ರೀತಿಯಲ್ಲಿ ನಡೆಯುವ ವಿದ್ಯಾರ್ಜನೆಯನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಕಿಶೋರ್ ಕುಮಾರ್ ಬಿಜೆಪಿ ಪೇರೆಂಟ್ಸ್ ಬಾಡಿ ಮೆಂಬರ್ , ದಾಮೋದರ ಶೆಣೈ ಪಡುಬಿದ್ರಿ, ಶ್ರೀಮತಿ ಪ್ರತಿಭಾ ಪಡುಬಿದ್ರಿ, ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿರುವ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಸಂಚಾಲಕರಾದ ವಸಂತ ಮಾಧವ ಶ್ರೀಮಾನ್,ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿಯವರು, ಡಾ। ಕಮಲಾ ಪ್ರಭಾಕರ್ ಭಟ್ ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಪ್ರಾಂಶುಪಾಲರಾದ ವಸಂತ ಬಲ್ಲಾಳ್ ಸ್ವಾಗತಿಸಿ, ವಿದ್ಯಾರ್ಥಿನಿ ಶರಣ್ಯ ಕಾರ್ಯಕ್ರಮ ನಿರೂಪಿಸಿ. ವಾತ್ಸಲ್ಯ ವಂದಿಸಿದರು.

**ಅಳಿಕೆ ಪ್ರೌಢಶಾಲೆಗೆ ಭೇಟಿ**

ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಮುಂದೆ ಆಯ್ದು ಕೊಳ್ಳಬಹುದಾದ ವಿಷಯಗಳ ಬಗ್ಗೆ ಮಾಹಿತಿ ನೀಡುವ ಕಾರ್ಯಾಗಾರವನ್ನು ಉಪನ್ಯಾಸಕರಾದ ಶೈಲಿನಿ ,ರಶ್ಮಿ ,ಮತ್ತು ತಿರುಮಲೇಶ್ವರ ಪ್ರಶಾಂತ್ ಇವರು ಶ್ರೀಸತ್ಯಸಾಯಿ ಲೋಕಸೇವಾ ಪ್ರೌಢ ಶಾಲೆ ಅಳಿಕೆಯಲ್ಲಿ ಭೇಟಿ ನೀಡಿ ನಡೆಸಿಕೊಟ್ಟರು.

**ಪೋಷಕರ ಸಭೆ: 08–03–2017**

ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳ ವಿಶೇಷ ವಿಜ್ಞಾನ ತರಭೇತಿಯ ಅಂಗವಾಗಿ ಪೋಷಕರ ಸಭೆಯನ್ನು ಆಯೋಜಿಸಿದ್ದು,ಇದರಲ್ಲಿ ವಸಂತ ಮಾಧವ ಶ್ರೀಮಾನ್ ಹಾಗೂ ವಸಂತ ಬಲ್ಲಾಳ್ ಶ್ರೀಮಾನ್ ಉಪಸ್ಥಿತರಿದ್ದರು.

**" ವಿಶೇಷ ತರಗತಿ–2017"**

ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ " ವಿಶೇಷ ತರಗತಿ–2017" ದೀಪ ಪ್ರಜ್ವಲನದ ಮೂಲಕ ಉದ್ಘಾಟನೆಗೊಂಡಿತು. ಮುಖ್ಯ ಅತಿಥಿಗಳಾಗಿ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು, ಪುತ್ತೂರು ಇದರ ಕ್ಯಾಂಪಸ್ ಡೈರೆಕ್ಟರ್ ಆದ ಶ್ರೀ ವಿವೇಕ್ ರಂಜನ್ ಭಂಡಾರಿಯವರು ಮಾತನಾಡಿ, "ಪಟ್ಟಣ ಮತ್ತು ಗ್ರಾಮೀಣ ಪ್ರದೇಶ ಎಂದು ತುಲನೆ ಮಾಡದೇ ಆತ್ಮವಿಶ್ವಾಸದಿಂದ, ಯಾರನ್ನೂ ಕೀಳಾಗಿ ಕಾಣದೆ, ಶ್ರಮಪಟ್ಟು ಅಭ್ಯಾಸ ಮಾಡಿ ಎಂಬ ಮಾತುಗಳಿಂದ ವಿದ್ಯಾರ್ಥಿಗಳನ್ನು ಕಲಿಕೆಗೆ ಪ್ರೇರೇಪಿಸಿದರು. ಈ ಸಂದರ್ಭದಲ್ಲಿ ಶಾಲಾ ಸಂಚಾಲಕರಾದ ಶ್ರೀವಸಂತಮಾಧವ ಅಧ್ಯಕ್ಷತೆ ವಹಿಸಿ, ಪದವಿ ವಿಭಾಗದ ಪ್ರಾಂಶುಪಾಲರು ಶ್ರೀಯುತ ಕೃಷ್ಣ ಪ್ರಸಾದ್ ಹಾಗೂ ಪದವಿ ಪೂರ್ವ ವಿಭಾಗದ ಪ್ರಾಂಶುಪಾಲರು ಶ್ರೀಯುತ ವಸಂತ ಬಲ್ಲಾಳ್ ಉಪಸ್ಥಿತರಿದ್ದರು. ಉಪನ್ಯಾಸಕಿ ಶ್ರೀಮತಿ ಜಯಲಕ್ಷ್ಮಿ ಕೆ ಕಾರ್ಯಕ್ರಮ ನಿರ್ವಹಿಸಿ ಕು. ರಕ್ಷಿತಾ ವಂದಿಸಿದರು.

**ಪರೀಕ್ಷಾ ಕೇಂದ್ರ**

ದಿನಾಂಕ 09–03–2017 ರಿಂದ 27–03–2017 ರ ವರೆಗೆ ಶ್ರೀರಾಮ ಪದವಿಪೂರ್ವ ವಿದ್ಯಾಲಯದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ನಡೆಯಿತು. ನಮ್ಮ ವಿದ್ಯಾಲಯದ 358ವಿದ್ಯಾರ್ಥಿಗಳು ಕರ್ನಾಟಕ ಪದವಿಪೂರ್ವ ಕಾಲೇಜು ಮಾಣಿಯ 117ವಿದ್ಯಾರ್ಥಿಗಳು, ಸರಕಾರಿ ಪದವಿ ಪೂರ್ವ ಕಾಲೇಜು ನಾರ್ಶ ಮೈದಾನದ 70 ವಿದ್ಯಾರ್ಥಿಗಳು, ಒಟ್ಟು 545 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

**2016–17ನೇ ಶೈಕ್ಷಣಿಕ ವರ್ಷದ ಪ್ರಥಮ ಪಿ.ಯು ವಾರ್ಷಿಕ ಪರೀಕ್ಷೆಯ ಫಲಿತಾಂಶ**

ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳು: 364
ತೇರ್ಗಡೆಯಾದ ವಿದ್ಯಾರ್ಥಿಗಳು : 336
ಒಟ್ಟು ಶೇಕಡ :92.30%

## ಪದವಿ ವಿಭಾಗ

**ವಿಶೇಷ ಉಪನ್ಯಾಸ 08.03.2017:**

**ಪ್ರಣತಿ ಇಂಗ್ಲೀಷ್ ಸಂಘದ ವತಿಯಿಂದ "Power of Mind"** ಎಂಬ ವಿಷಯ ಮಂಡನೆಯನ್ನು ಶ್ರೀಮತಿ ಉಷಾ ವಸ್ತಾರೆ ನಡೆಸಿ ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆ, ಮಾನಸಿಕವಾಗಿ ದೃಢತೆ ಹೊಂದುವುದು, ಮನೋಭಾವಗಳ ವಿಕಾಸ, ಶೈಕ್ಷಣಿಕ ಬೆಳವಣಿಗೆ, ದುರ್ಬಲತೆಯ ನಿವಾರಣೆ, ಪರೀಕ್ಷೆ ಸಂದರ್ಭದಲ್ಲಿ ಮಾನಸಿಕವಾಗಿ ಶಕ್ತಿವಂತರಾಗುವುದು ಹೇಗೆ? ಪರೀಕ್ಷೆಗಳನ್ನು ಎದುರಿಸುವುದು ಹೇಗೆ? ಪರೀಕ್ಷೆ ಎಂಬ ಭಯದ ವಾತಾವರಣವನ್ನು ನಿವಾರಿಸುವುದು ಹೇಗೆ ಎಂಬ ವಿಚಾರವನ್ನು ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ ಸುರೇಂದ್ರ ಶೆಣೈ ಮತ್ತು ವಿವೇಕ್ ಟೀಮ್‌ನ ವಾಸುದೇವ ಮಂಚಿ ಇವರು ಉಪಸ್ಥಿತರಿದ್ದರು.

**ಕಮ್ಮಾಜೆ ಸುಬ್ಬಣ್ಣ ಭಟ್ ದತ್ತಿನಿಧಿ ಕಾರ್ಯಕ್ರಮ**

ಬಂಟ್ವಾಳ ಕನ್ನಡ ಸಾಹಿತ್ಯ ಪರಿಷತ್, ಪ್ರಮಾಥಿ ಕನ್ನಡ ಸಂಘ ಇವರ ಆಶ್ರಯದಲ್ಲಿ ಏರ್ಪಡಿಸಲಾದ ಕಮ್ಮಾಜೆ ಸುಬ್ಬಣ್ಣ ಭಟ್ ದತ್ತಿನಿಧಿ ಕಾರ್ಯಕ್ರಮದಲ್ಲಿ ಶ್ರೀ ಶಾರದಾ ಪ್ರೌಢ ಶಾಲೆ ಪಾಣೆಮಂಗಳೂರಿನ ಪರಮೇಶ್ವರ ಹೆಗ್ಡೆ ಕನ್ನಡ ಕಾವ್ಯಗಳ ಮೇಲೆ ಸಂಸ್ಕೃತದ ಪ್ರಭಾವ ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು.
ಶ್ರೀ ವಸಂತ ಮಾಧವ, ಬಂಟ್ವಾಳ ತಾಲೂಕು ಕ.ಸಾ.ಪ. ಅಧ್ಯಕ್ಷ ಕೆ.ಮೋಹನ್ ರಾವ್ ಪ್ರಾಚಾರ್ಯ ಶ್ರೀ ಕೃಷ್ಣಪ್ರಸಾದ ಕಾಯರ್‌ಕಟ್ಟೆ, ಪೊಳಲಿ ನಿತ್ಯಾನಂದ ಕಾರಂತ, ಜಿ.ಶಿವಶಂಕರ್, ಕೊಳಕೆ ಗಂಗಾಧರ ಭಟ್ ಉಪಸ್ಥಿತರಿದ್ದರು. ನಿಕಟಪೂರ್ವಾಧ್ಯಕ್ಷ ಜಯಾನಂದ ಪೆರಾಜೆ ಸ್ವಾಗತಿಸಿ, ದುರ್ಗಾಪ್ರಸಾದ ನಿರೂಪಿಸಿ, ಅರ್ಚನ ವಂದಿಸಿದರು. ದ.ಕ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರದೀಪ ಕುಮಾರ್ ಕಲ್ಕೂರ ಅಧ್ಯಕ್ಷತೆ ವಹಿಸಿದ್ದರು.

**ಸ್ಥಳೀಯ ವಿಚಾರಣಾ ಸಮಿತಿ 16.03.2017;**

ಕಾಲೇಜಿನ ವಾರ್ಷಿಕ ಅಭಿವೃದ್ಧಿ ಮತ್ತು ಎಲ್ಲಾ ವ್ಯವಸ್ಥೆಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರೊ। ಶಿವರಾಮ್, ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ವಿಭಾಗದ ಪ್ರಾಂಶುಪಾಲೆ ಅನಿತಾ ರವಿಶಂಕರ್, ಭೌತಶಾಸ್ತ್ರ ವಿಭಾಗದ ಸಂಗಪ್ಪ ಇವರು ಭೇಟಿ ನೀಡಿ ಪರಿಶೀಲಿಸಿದರು.

**ಪಾಂಚಜನ್ಯ ರೇಡಿಯೋ 27.03.2017:**

ಪುತ್ತೂರು ವಿವೇಕಾನಂದ ಕಾಲೇಜಿನ ಪಾಂಚಜನ್ಯ ರೇಡಿಯೋ 90.8 ಎಫ್.ಎಮ್. ನ ಹಾಡು ಹಾಗೂ ಪ್ರಬಂಧ ಮಂಡನೆ ವಿಭಾಗದ ರೆಕಾರ್ಡಿಂಗ್‌ನ್ನು ವಿದ್ಯಾರ್ಥಿಗಳಾದ ಮಲ್ಲಿಕಾ, ಕಾವ್ಯಶ್ರೀ, ತೇಜಸ್ವಿನಿ, ಲಾವಣ್ಯ, ನವನೀತ, ಸ್ವಾತಿಶ್ರೀ, ಸ್ವಾತಿ ವೈ., ಸವಿತಾ, ಸ್ವಾತಿ, ಜೀವಿತಾ, ನಿಶಾ. ಶರಣ್ ಕಾರ್ಯಕ್ರಮ ನೀಡಿದರು. ಪ್ರಾಂಶುಪಾಲ ಕೃಷ್ಣಪ್ರಸಾದ ಜೊತೆಗಿದ್ದರು.

**ವಿಚಾರ ಸಂಕಿರಣ –21.03.2017**

ಬಂಟ್ವಾಳ ಪತ್ರಕರ್ತರ ಸಂಘ ಹಾಗೂ ಪ್ರೆಸ್‌ಕ್ಲಬ್ ಇದರ ವತಿಯಿಂದ ಬಿಸಿರೋಡ್ ಲಯನ್ಸ್ ಕ್ಲಬ್‌ನಲ್ಲಿ ನಡೆದ ಮಾಧ್ಯಮದಲ್ಲಿ ಭವಿಷ್ಯದ ಸವಾಲುಗಳು ಎಂಬ ವಿಚಾರ ಸಂಕಿರಣ ಹಾಗೂ ರಜತ ವರ್ಷಾಚರಣೆಯ ಸಂಭ್ರಮದ ಸೆಮಿನಾರ್‌ಗೆ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ಧನಂಜಯ, ತೃಪ್ತಿ, ತ್ರಿವೇಣಿ, ನಿಖಿತ್, ಸತೀಶ್, ಅನ್ವಿತಾ, ಕಾವ್ಯ, ಚೈತ್ರಾ, ಮಮತಾ ಜಿ., ಸವಿತಾ ಸಿ. ಭಾಗವಹಿಸಿರುತ್ತಾರೆ.

**ಸೋಶಿಯಲ್ ಮೀಡಿಯಾ ಮೀಟ್ 4.3.17 – 5.3.17**

ಮಂಗಳೂರಿನ ಸಂಘನಿಕೇತನದಲ್ಲಿ ನಡೆದ ಮಂಥನ –2017 ಸೋಶಿಯಲ್ ಮೀಡಿಯಾ ಮೀಟ್ ಎಂಬ ಮಾಧ್ಯಮದ ವಿಷಯಕ್ಕೆ ಸಂಬಂಧಿಸಿದ ವಿಚಾರ ಸಂಕಿರಣದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ಸಂತೋಷ್, ವರದರಾಜ್, ಅಭಿಷೇಕ್, ಸುನಿಲ್, ಮನಿತ್ ಕುಮಾರ್, ಗುರುರಾಜ್, ಮಹಾಲಕ್ಷ್ಮಿ, ನಿರೀಕ್ಷಾ, ಮಮತಾ ಜಿ. ಭಾಗವಹಿಸಿರುತ್ತಾರೆ.

**29.05.17 ಸ್ವಚ್ಛ ಭಾರತಕ್ಕಾಗಿ ಜಾದೂ :**

ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯ ಕಲ್ಲಡ್ಕ ಹಾಗೂ ರಾಮಕೃಷ್ಣ ಮಿಷನ್ ಮಂಗಳೂರು ಇದರ ವತಿಯಿಂದ ಸ್ವಚ್ಛ ಭಾರತ ಅಭಿಯಾನ ಪ್ರಯುಕ್ತ ಕಾಲೇಜಿನಲ್ಲಿ ಕುದ್ರೋಳಿ ಗಣೇಶ್ ಇವರಿಂದ ಜಾದೂ ಪ್ರದರ್ಶನ ನಡೆಯಿತು. ಕಾರ್ಯಕ್ರಮವನ್ನು ಡಾ। ಕಮಲಾ ಪ್ರಭಾಕರ ಭಟ್ ಉದ್ಘಾಟಿಸಿ ಮಾತನಾಡಿದ ಅವರು ಸ್ವಚ್ಛತೆಯ ಮನೋಭಾವ ಜನರ ಮನಸ್ಸಿನಲ್ಲಿ ಬಂದಾಗ ಮಾತ್ರ ದೇಶದಲ್ಲಿ ಸ್ವಚ್ಛತೆ ತರಲು ಸಾಧ್ಯ ಎಂದು ಹೇಳಿದರು.

ವೇದಿಕೆಯಲ್ಲಿ ಉಪನ್ಯಾಸಕ ಹರೀಶ್ ಹಾಗೂ ವಿದ್ಯಾರ್ಥಿಗಳಾದ ವಿಘ್ನೇಶ್ ಹಾಗೂ ಪ್ರಕಾಶ್ ಬೋರ್ಕರ್ ಉಪಸ್ಥಿತರಿದ್ದರು.

**ಚಲನಚಿತ್ರ ಪ್ರದರ್ಶನ 25.03.2017**

ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು ವಿವೇಕಾನಂದ ಧ್ಯೇಯವುಳ್ಳ ವಿವೇಕಾನಂದರ ಚರಿತ್ರೆಯನ್ನು ಸಾರುವಂತಹ ಸಿನೆಮಾವನ್ನು ವೀಕ್ಷಿಸಿದರು.

**ಶ್ರಮದಾನ 26.03.2017**

ಮಂಚಿ ಸೋಮನಾಥೇಶ್ವರ ದೇವಸ್ಥಾನ ಕುಂಡಾವು ಇಲ್ಲಿನ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು ಭೇಟಿ ನೀಡಿದರು.

**ಕೈಗಾರಿಕಾ ಘಟಕಕ್ಕೆ ಭೇಟಿ 21.03.2017:**

ಪದವಿ ವಿಭಾಗದ ವತಿಯಿಂದ Industrial Visit, ಮೂಡಬಿದಿರೆಯ ಬನ್ನಡ್ಕದ ಎಸ್‌ಕೆಎಫ್ ಗ್ರೂಪ್ ಆಫ್ ಕಂಪೆನಿ, ಜಿ. ರಾಮಕೃಷ್ಣಾಚಾರ್ ಅವರ ಮಾಲಿಕತ್ವದ ಕಂಪೆನಿ, Abbas Industry, Soans Farms ಗೆ ಭೇಟಿ ನೀಡಿ ಅಲ್ಲಿನ ಆಯವ್ಯಯ ಖರ್ಚುವೆಚ್ಚಗಳ ಬಗ್ಗೆ ಮಾಹಿತಿಯನ್ನು ಕಲೆ ಹಾಕಿ ಒಂದು ಯೋಜನಾ ವರದಿಯನ್ನು ಸಿದ್ಧಪಡಿಸಿರುತ್ತಾರೆ. ವಾಣಿಜ್ಯಶಾಸ್ತ್ರ ಉಪನ್ಯಾಸಕರಾದ ರಂಜಿತ್, ಜಯಲಕ್ಷ್ಮಿ, ವಿನುತಲಕ್ಷ್ಮಿ ಇವರು ಸಹಕರಿಸಿದರು.

25.03.17 ಪುತ್ತೂರಿನ ಕ್ಯಾಂಪ್ಕೋ ಲಿ.ಗೆ ಚಾಕಲೇಟ್ ಫ್ಯಾಕ್ಟರಿಗೆ ಕಾಲೇಜಿನ ವಿದ್ಯಾರ್ಥಿಗಳ ತಂಡವು ಭೇಟಿ ನೀಡಿ ಅಲ್ಲಿನ ಆಯವ್ಯಯ ಖರ್ಚುವೆಚ್ಚಗಳ ಬಗ್ಗೆ ಮಾಹಿತಿಯನ್ನು ಕಲೆ ಹಾಕಿ ಒಂದು ಯೋಜನಾ ವರದಿಯನ್ನು ಸಿದ್ಧಪಡಿಸಿರುತ್ತಾರೆ. ವಾಣಿಜ್ಯಶಾಸ್ತ್ರ ಉಪನ್ಯಾಸಕಿ ಶೈಲಜಾ ಇವರು ಸಹಕರಿಸಿದರು.

**ಪತ್ರವಾಚನ 31–3–17**

ಪ್ರಬೋಧ ವಾಣಿಜ್ಯ ಸಂಘದ ಮತ್ತು IQAC ಯ ಜಂಟಿ ಸಹಯೋಗದೊಂದಿಗೆ "Explore2017 Students Report on Industrial Visit an Overview" ಎಂಬ ಪತ್ರವಾಚನ ಕಾರ್ಯಕ್ರಮವು ನಡೆಯಿತು. ಈ ಕಾರ್ಯಕ್ರಮದ ವೇದಿಕೆಯಲ್ಲಿ ಪ್ರೋ.ಹೈದರಾಲಿ ಅಸಿಸ್ಟೆಂಟ್ ಪ್ರೋ.ಸರಕಾರಿ ಪ್ರಥಮ ದರ್ಜೆ ಕಾಲೇಜು ಬಂಟ್ವಾಳ, ಮತ್ತು ಪ್ರೋ.ಶರಚ್ಚಂದ್ರ ಶ್ರೀ.ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಉಜಿರೆ. ಹಾಗೆಯೇ ಕಾಲೇಜಿನ ಪ್ರಾಂಶುಪಾಲರಾದ ಕೃಷ್ಣಪ್ರಸಾದ ಕಾಯರಕಟ್ಟೆ ಇವರು ಉಪಸ್ಥಿತರಿದ್ದರು.

ಪತ್ರವಾಚನವು ಒಂದು ಜೀವನದ ಕಲೆ , ಅವರಲ್ಲಿ ತಾಂತ್ರಿಕ ನೈಪುಣ್ಯತೆ, ವಿಷಯ ಮಂಡನೆಯ ಪ್ರಾಮುಖ್ಯತೆಯನ್ನು ಪಡೆಯುತ್ತದೆ ಎಂದು ಹೈದರಾಲಿ ಯವರು ಹೇಳಿದರು. ಹಾಗೆಯೇ ಮಾಹಿತಿ ಸಂಗ್ರಹವು ವಿದ್ಯಾರ್ಥಿಗಳ ಕೌಶಲ್ಯವನ್ನು ಹೆಚ್ಚಿಸುತ್ತದೆ ಎಂದು ಶರಚ್ಚಂದ್ರ ಹೇಳಿದರು.

ಈ ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಕುಮಾರಿ ಹರ್ಷಿತಾ ಸ್ವಾಗತಿಸಿ ಸುಕನ್ಯಾ ವಂದಿಸಿದರು. ಉಪನ್ಯಾಸಕಿ ಶೈಲಜಾ ಕಾರ್ಯಕ್ರಮ ನಿರೂಪಿಸಿದರು. ಈ ಪತ್ರವಾಚನ ಸ್ಪರ್ಧೆಯಲ್ಲಿ ಅಭಿಷೇಕ್ ತೃತೀಯ ಬಿ.ಕಾಂ ಎ ತಂಡವು ಪ್ರಥಮ ಬಹುಮಾನವನ್ನು ಪಡೆದಿರುತ್ತದೆ.

**ಚುನಾವಣಾ ಗುರುತಿನ ಚೀಟಿ** 15.03.2017

ಮಾನವಿಕ ಸಂಘದ ವತಿಯಿಂದ ನಡೆದ "ಚುನಾವಣಾ ಗುರುತಿನ ಚೀಟಿ"ಯನ್ನು ಮಾಡುವ ಪ್ರಕ್ರಿಯೆಗೆ ಶ್ರೀ ವಜ್ರನಾಥ ಕಲ್ಲಡ್ಕ, ಸಂಪತ್ ಕಡೇಶಿವಾಲಯ, ದೀಪಕ್ ಶೆಟ್ಟಿ, ಇವರುಗಳು ಚಾಲನೆ ನೀಡಿದರು.ಈ ಪ್ರಕ್ರಿಯೆಯಲ್ಲಿ ಸುಮಾರು 80 ವಿದ್ಯಾರ್ಥಿಗಳು ಪಾಲ್ಗೊಂಡರು.

**ರಾಷ್ಟ್ರಪತಿ ಚುನಾವಣಾ ಸಮೀಕ್ಷೆ:**

ದಿನಾಂಕ 31.03.2017 ರಂದು ಮಾನವಿಕ ಸಂಘ ಮತ್ತು IQAC ಯ ಜಂಟಿ ಆಶ್ರಯದಲ್ಲಿ ಮುಂಬರುವ ರಾಷ್ಟ್ರಪತಿ ಚುನಾವಣಾ ಸಮೀಕ್ಷೆಯನ್ನು ಅಂತಿಮ ಬಿ ಎ ವಿದ್ಯಾರ್ಥಿಗಳು ದಿನಾಂಕ 25.03.2017ರಿಂದ ವಿವಿಧ ಕ್ಷೇತ್ರದಲ್ಲಿ ನಡೆಸಿದರು. ಇದರ ವರದಿ ಮಂಡನಾ ಕಾರ್ಯಕ್ರಮವನ್ನು ದಿನಾಂಕ 31.03.2017ರಂದು ನಡೆಯಿತು. ಈ ಕಾರ್ಯಕ್ರಮದಲ್ಲಿ ಸುರತ್ಕಲ್ ಗೋವಿಂದದಾಸ್ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕಿ ಸುಧಾ.ಯು ಅವರು ಭಾಗವಹಿಸಿದ್ದು, ಇದರಲ್ಲಿ "ಸರಸ್ವತಿ" ತಂಡವು ಉತ್ತಮ ತಂಡ ಪ್ರಶಸ್ತಿಯನ್ನು ತನ್ನದಾಗಿಸಿತು. ವೇದಿಕೆಯಲ್ಲಿ ಶಿವಗಿರಿ ಸತೀಶ್, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ವಸಂತ ಬಲ್ಲಾಳ್ ಉಪಸ್ಥಿತರಿದ್ದರು. ಮಮತಾ ಸ್ವಾಗತಿಸಿ, ಶಿವಪ್ರಸಾದ್ ವಂದಿಸಿ, ಸ್ವರ್ಣಕೀರ್ತಿ ಕಾರ್ಯಕ್ರಮ ನಿರೂಪಿಸಿದರು.

## ಸಂಸ್ಕೃತದಲ್ಲಿ ವಾದ ಮಂಡನೆ




ಉತ್ತರಪ್ರದೇಶದ ವಾರಾಣಸಿ ಜಿಲ್ಲೆಯ ಸತ್ರನ್ಯಾಯಾಲಯದಲ್ಲಿ ಶ್ಯಾಮಜೀ ಉಪಾಧ್ಯಾಯ ಎಂಬ ವಕೀಲರು ಸಂಸ್ಕೃತದಲ್ಲಿ ತಮ್ಮ ವಾದವನ್ನು ಮಂಡಿಸುತ್ತಿದ್ದರು. ಸೀತಾಸೋನಿ ಎಂಬವರ ಮೇಲೆ ಸರಕಾರ ಹೊರಿಸಿದ ಕೊಲೆ ಪ್ರಕರಣದಲ್ಲಿ ಸೀತಾಸೋನಿಯವರ ಪರವಾಗಿ ಅವರು ವಾದ ಮಾಡಿದ್ದರು. ಈ ಘಟನೆ ನಡೆದುದು 2004 ಜೂನ್‌ನಲ್ಲಿ. ನ್ಯಾಯಮೂರ್ತಿ ಸುರೇಶಕುಮಾರಯಾದವ ಎಂಬವರು ಆಗ ನ್ಯಾಯಾಧೀಶರಾಗಿದ್ದರು.

ಶ್ಯಾಮಜೀ ಉಪಾಧ್ಯಾಯರು ಸಂಸ್ಕೃತದಲ್ಲಿ ಮಂಡಿಸಿದ ವಾದವನ್ನು ಮಾನ್ಯ ನ್ಯಾಯಮೂರ್ತಿಗಳು ಪೂರ್ಣವಾಗಿ ಶ್ರದ್ಧೆಯಿಂದ ಆಲಿಸಿದರು. ಇತರ ಹಿರಿಕಿರಿಯ ನ್ಯಾಯವಾದಿಗಳೂ ಇದನ್ನು ಕುತೂಹಲದಿಂದ ಆಲಿಸಿದರು. ಶ್ಯಾಮಜೀ ಉಪಾಧ್ಯಾಯರ ವಾದ ಮುಗಿದ ನಂತರ ಭಾರತೀಯ ದಂಡ ಸಂಹಿತೆಯ 302ನೇ ಧಾರೆಯ ಆಯುಧ ಅಧಿನಿಯಮದ 25(2) ಕಲಮಿನ ಪ್ರಕಾರ ಸೀತಾಸೋನಿಯವರನ್ನು ನ್ಯಾಯಾಧೀಶರು ಆರೋಪಮುಕ್ತರನ್ನಾಗಿ ಘೋಷಿಸಿದರು.

ನ್ಯಾಯವಾದಿಯವರು ಸಂಸ್ಕೃತದಲ್ಲಿ ವಾದ ಮಂಡಿಸಿದ್ದು ಹಾಗೂ ನ್ಯಾಯಮೂರ್ತಿಗಳು ಅದನ್ನು ಪೂರ್ತಿ ಆಲಿಸಿ ಅರ್ಥಮಾಡಿಕೊಂಡು ನಿರ್ಣಯ ನೀಡಿದ್ದು – ಇವೆರಡೂ ಅಪೂರ್ವ ಘಟನೆಗಳೇ ಸರಿ.

ಶ್ಯಾಮಜೀ ಉಪಾಧ್ಯಾಯರು ಇದಕ್ಕೂ ಮೊದಲು ಹಲವಾರು ಬಾರಿ ಸಂಸ್ಕೃತದಲ್ಲಿ ವಾದ ಮಂಡಿಸಿದ್ದಾರೆ. ಅವರು ನ್ಯಾಯವಾದಿಯಾಗಿ ಹೆಸರು ನೋಂದಾಯಿಸಿಕೊಂಡದ್ದು 1974ರಲ್ಲಿ. ಸ್ವತಂತ್ರವಾಗಿ ಆ ವೃತ್ತಿಯನ್ನು ಆರಂಭಿಸಿದ ಮೊದಲ ದಿನವೇ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ವಿಚಾರಣೆಯ ದಿನವನ್ನು ಮುಂದಕ್ಕೆ ಹಾಕಬೇಕೆಂದು ಪ್ರಾರ್ಥನಾ ಪತ್ರವನ್ನು ಅವರು ಸಂಸ್ಕೃತದಲ್ಲಿ ಸಲ್ಲಿಸಿದ್ದರು–'ಅಸ್ಮಿನ್ ಮಾನವೀಯೇ ನ್ಯಾಯಾಲಯೇ ಇದಂ ಪ್ರಾರ್ಥನಾಪತ್ರಂ ಪ್ರಸ್ತೌಮಿ ಅದ್ಯ ವಾದೀ ಜ್ವರಾಕ್ರಾಂತಃ ಅಸ್ತಿ. ಅತಃ ತಸ್ಯ ಉಪಸ್ಥಿತಿಃ ನ್ಯಾಯಾಲಯೇ ಸಂಭಾವಿತಾ ನಾಸ್ತಿ. ಅತಃ ಅನ್ಯಾ ತಾರೀಕಾ ದೇಯಾ' ಎಂದು. ಇದನ್ನು ಕೇಳಿದ ಇಡೀ ನ್ಯಾಯಾಲಯ ಕ್ಷಣಕಾಲ ಆಶ್ಚರ್ಯದಿಂದ ಸ್ತಬ್ಧವಾಯಿತು. ನಂತರ ನ್ಯಾಯಾಧೀಶರಾದ ಎ.ಕೆ.ಸಿಂಹ ಅವರು ನಸುನಗುತ್ತಲೇ – 'ಇದಕ್ಕೆ ಸಂಸ್ಕೃತದಲ್ಲಿ ಉತ್ತರವನ್ನು ಏನೆಂದು ಬರೆಯಬೇಕು?' ಎಂದು ಕೇಳಿದರು. ಆಗ ಶ್ಯಾಮಜೀ ಉಪಾಧ್ಯಾಯರು ನೀಡಿದ ಸಲಹೆಯಂತೆ ಅವರು 'ಸ್ವೀಕೃತಮ್' ಎಂದು ಸಂಸ್ಕೃತದಲ್ಲೇ ಬರೆದರು.